
# ಬೆಳಕಿನ ಸಂಚಲನ

ಸಂಪುಟ 14, ಸಂಚಿಕೆ 2 ದ್ವೈಮಾಸಿಕ ವಾರ್ತಾಪತ್ರ ಮಾರ್ಚ್-ಏಪ್ರಿಲ್ 2026



**ಗುರೂಜಿ ಕೃಷ್ಣಾನಂದ** (1939-2012)

### ಬೆಳಕು

ಇದು ಭೌತಿಕ ಮಟ್ಟದ ಬೆಳಕಲ್ಲ, ಅತ್ಯಂತ ಸೂಕ್ಷ್ಮ ಬೆಳಕು. ಈ ಬೆಳಕು ಎಲ್ಲ ಸೃಷ್ಟಿಯ ಮೂಲ. ಎಲ್ಲ ಸಕ್ರಿಯ ಶಕ್ತಿಗಳ ಮೂಲ. ಪ್ರೀತಿ, ಶಾಂತಿ, ಸತ್ಯ, ವಿವೇಕ ಮತ್ತು ಸಮಸ್ತ ಜೀವ ರಾಶಿಗಳ ಮೂಲ. ಈ ಬೆಳಕೇ ದೇವರು.

### ಚಾನಲಿಂಗ್

ಬೆಳಕನ್ನು ನಮ್ಮೊಳಗೆ ಪ್ರವೇಶಿಸುವಂತೆ ಉದ್ದೇಶಿಸಿ, ನಂತರ ಇಡೀ ಪ್ರಪಂಚಕ್ಕೆ ಹರಡುವಂತೆ ಮಾಡುವುದೇ ಚಾನಲಿಂಗ್. ನಮ್ಮ ಶರೀರ ಬೆಳಕಿನ ಅತ್ಯುನ್ನತ ತರಂಗಗಳನ್ನು ಸ್ಥೂಲ ಮಟ್ಟದ ತರಂಗಗಳಾಗಿ ಬದಲಾಯಿಸುತ್ತದೆ.

ಬೆಳಕಿನ ಕಂಪನಗಳು ಎಲ್ಲ ಜೀವಿಗಳನ್ನು ಮತ್ತು ಪ್ರಕೃತಿಯನ್ನು ತಲುಪುತ್ತವೆ. ಅವು ಹೀಲಿಂಗ್ ಚೈತನ್ಯಗಳನ್ನು, ಪ್ರೇಮ, ಶಾಂತಿ ಮತ್ತು ಸಕಾರಾತ್ಮಕತೆಗಳನ್ನು ಹೊಂದಿರುತ್ತವೆ. ಅವು ಪರಿವರ್ತನೆಗೆ ಸಹಾಯ ಮಾಡುತ್ತವೆ. ನಾವು ಉತ್ತಮ ಮಾನವ ಜೀವಿಗಳಾಗುತ್ತೇವೆ. ನಮ್ಮ ಪ್ರಪಂಚ, ಉತ್ತಮ ಪ್ರಪಂಚವಾಗುತ್ತದೆ.

### ತಂತ್ರ

ನಿಮ್ಮ ಮೇಲೆ ಬೆಳಕಿನ ಸಾಗರವಿದೆ ಎಂದು ಕಲ್ಪಿಸಿಕೊಳ್ಳಿ. ಬೆಳಕು ನಿಮ್ಮ ದೇಹದೊಳಕ್ಕೆ ಬಂದು ತುಂಬಿಕೊಂಡಂತೆ ಭಾವಿಸಿ. ನಂತರ ಬೆಳಕಿನಲ್ಲಿರುವ ಪ್ರೇಮ ಮತ್ತು ಶಾಂತಿಗಳನ್ನು ಒಂದು ನಿಮಿಷದವರೆಗೆ ಅನುಭವಿಸಿ. ಆ ಬೆಳಕು ಕ್ರಮೇಣ ನಿಮ್ಮ ಮನೆ, ಸುತ್ತಮುತ್ತಲ ಪ್ರದೇಶ, ದೇಶ ಮತ್ತು ಪ್ರಪಂಚಕ್ಕೆ ಹರಡಿದಂತೆ ಕಲ್ಪಿಸಿಕೊಳ್ಳಿ.

ಇದನ್ನು ಕನಿಷ್ಟ 7 ನಿಮಿಷ ಅಭ್ಯಾಸ ಮಾಡಿ.

### ಲೈಟ್ ಚಾನಲ್ಸ್ ವಿಶ್ವ ಸಂಚಲನ

ಈ ಸಂಚಲನವನ್ನು ಋಷಿಮಾರ್ಗದ ಸಂಸ್ಥಾಪಕರಾದ ಗುರೂಜಿ ಕೃಷ್ಣಾನಂದರವರು 18-05-2008 ರಂದು ಪ್ರಾರಂಭಿಸಿದರು.

ಈ ಸಂಚಲನವೆಂದರೆ ಬೆಳಕನ್ನು ಪ್ರತಿ ದಿನ ಏಳು ನಿಮಿಷಗಳವರೆಗೆ ಬೆಳಿಗ್ಗೆ ಎದ್ದಾಗ ಅಥವಾ ರಾತ್ರಿ ಮಲಗುವ ಮೊದಲು ನಮ್ಮ ನಮ್ಮ ಸ್ಥಳಗಳಿಂದಲೇ ಚಾನಲ್ ಮಾಡುವುದು.

ಈ ಸಂಚಲನದ ಗುರಿ ಮುಖ್ಯವಾಗಿ ಈ ಭೂಮಿಯ ಮೇಲೆ ಶಾಂತಿಯನ್ನು ತರುವುದು.

### ಸಂಚಲನದ ವೈಶಿಷ್ಟ್ಯತೆ

- ಬೆಳಕಿನಿಂದ ಏಕತೆ.
- ಇದು ಧಾರ್ಮಿಕ ಚಟುವಟಿಕೆಯಲ್ಲ. ವಿಶ್ವಾತ್ಮಕವಾದದ್ದು.
- ಇಲ್ಲಿ ಯಾವುದೇ ಕಟ್ಟುಪಾಡುಗಳಿಲ್ಲ.
- ಇಲ್ಲಿ ಸದಸ್ಯತ್ವವಿಲ್ಲ.
- ಶಾಂತಿ ನೆಲೆಸಲು ಪ್ರತಿಯೊಬ್ಬರೂ ನೆರವಾಗಬಹುದು.
- ಇದು ಪ್ರತಿ ವ್ಯಕ್ತಿಗೆ ಮತ್ತು ವಿಶ್ವಕ್ಕೆ ಸಹಾಯಕಾರಿ.
- ಹೊಸಯುಗಕ್ಕೆ ಪ್ರವೇಶಿಸಲು ಇದು ನಮ್ಮನ್ನು ಮತ್ತು ವಿಶ್ವವನ್ನು ಸಿದ್ಧಗೊಳಿಸುತ್ತದೆ.

## ಒಂದು ಸಂದೇಶ

**ಗುರೂಜಿ ಕೃಷ್ಣಾನಂದ**

(ಗುರೂಜಿಯವರ ಭಾಷಣದ ಆಯ್ದ ಭಾಗಗಳು – ಫೆಬ್ರುವರಿ 29, 2004)

**ಅನು: ಶ್ರೀದೇವಿ**

ನಾವು ದೇವರನ್ನು ಹೇಗೆ ಅನುಭವಿಸುತ್ತೇವೆ ಎಂದು ಚರ್ಚಿಸುತ್ತಿದ್ದೆವು ಮತ್ತು ನಾವು ದೇವರನ್ನು ಅನೇಕ ರೀತಿಯಲ್ಲಿ ಅನುಭವಿಸಬಹುದು ಎಂದು ಯೋಚಿಸಿದೆವು. ಒಂದು ರೀತಿಯು ಹೀಗಿದೆ. ನಾವು ಧ್ಯಾನ ಮಾಡುವಾಗ ಅವನನ್ನು ಬೆಳಕಾಗಿ ಅನುಭವಿಸುತ್ತೇವೆ. ಅನೇಕರು ತಮ್ಮ ಅನುಭವಗಳನ್ನು ಹೇಳುವುದನ್ನು ನಾನು ಕೇಳುತ್ತೇನೆ. ನಾವು ಧ್ಯಾನ ಮಾಡುವಾಗ, ಕೆಲವು ಹಂತದಲ್ಲಿ, ಕೆಲವು ಸಮಯದಲ್ಲಿ, ನಾವು ಬೆಳಕನ್ನು ಕಾಣುತ್ತೇವೆ. ನಾವು ಬೆಳಕನ್ನು ನೋಡುವುದು ಮಾತ್ರವಲ್ಲ, ನಾವು ಬೆಳಕನ್ನು ಅನುಭವಿಸುತ್ತೇವೆ. ಕೆಲವೊಮ್ಮೆ, ನಾವು ಬೆಳಕೇ ಆಗುತ್ತೇವೆ. ನಾವು ಬೆಳಕನ್ನು ಅನುಭವಿಸಿದಾಗ, ನಾವು ಸ್ವತಃ ದೇವರನ್ನು ಅನುಭವಿಸುತ್ತೇವೆ. ಯಾವುದೇ ಉದ್ವಿಗ್ನತೆ, ಯಾವುದೇ ಕೆಟ್ಟ ಭಾವನೆ, ಯಾವುದೇ ದೂರುಗಳು ಮತ್ತು ಗೊಣಗಾಟಗಳು ಇಲ್ಲದಿದ್ದಾಗ ನಾವು ದೇವರನ್ನು ಶಾಂತಿಯಾಗಿ ಅನುಭವಿಸಬಹುದು. ಶಾಂತಿ ಇದ್ದಾಗ, ಅದು ದೇವರು. ನಾವು ದೇವರನ್ನು ಶಾಂತಿಯಾಗಿ ಅನುಭವಿಸುತ್ತೇವೆ.

ನಾವು ವೈಶಾಲ್ಯತೆಯನ್ನು ದೇವರಾಗಿ ಅನುಭವಿಸಬಹುದು. ಆಕಾಶದ ಬಗ್ಗೆ ಯೋಚಿಸಿ, ನಾವು ಈ ವೈಶಾಲ್ಯತೆಯನ್ನು ಇತರ ಮಟ್ಟಗಳಲ್ಲಿಯೂ ಅನುಭವಿಸಬಹುದು. ನಾವು ನಮ್ಮ ಭಾವನೆಗಳನ್ನು ವಿಸ್ತರಿಸಬಹುದು, ನಮ್ಮ ಚಿಂತನೆಯನ್ನು ವಿಸ್ತರಿಸಬಹುದು. ಎಲ್ಲಿ ವೈಶಾಲ್ಯತೆ ಇದೆಯೋ ಅಲ್ಲಿ ದೇವರು ಇರುತ್ತಾನೆ.

## ಘಟನಾವಳಿಗಳು

**ಜಯಂತ್ ದೇಶ್‌ಪಾಂಡೆ; ಅನು: ಶ್ರೀದೇವಿ**

ಲೈಟ್ ಮಾಸ್ಟರ್ಸ್‌ಗಳು ಹೊಸ ಯುಗವನ್ನು ಸ್ಥಾಪಿಸುವ ಪ್ರಕ್ರಿಯೆಗಳನ್ನು ಪ್ರಾರಂಭಿಸಿದ ಕಾರ್ಯಕ್ರಮದಲ್ಲಿ ಮಹರ್ಷಿ ಅಮರರವರು ಉಪಸ್ಥಿತರಿದ್ದರು. ನಾವು ಈಗ ಪರಿವರ್ತನೆಯ ಹಂತವನ್ನು ಹಾದುಹೋಗುತ್ತಿದ್ದೇವೆ. ಹೊಸ ಯುಗವು ಪ್ರೀತಿ ಮತ್ತು ಶಾಂತಿಯಿಂದ ತುಂಬಿರುತ್ತದೆ. ನಕಾರಾತ್ಮಕತೆಯ ಯಾವುದೇ ಕುರುಹು ಇರುವುದಿಲ್ಲ ಮತ್ತು ಸುಳ್ಳನ್ನು ಹೇಳಬಹುದು ಎಂದು ಕೂಡ ಜನರಿಗೆ ತಿಳಿದಿರುವುದಿಲ್ಲ. ಹೊಸ ಯುಗದತ್ತ ನಮ್ಮ ಪ್ರಗತಿಯನ್ನು ಮಾನವರ ಆಧ್ಯಾತ್ಮಿಕ ಪ್ರಯತ್ನಗಳಿಂದ ತ್ವರಿತಗೊಳಿಸಬಹುದು. ಲೈಟ್ ಚಾನೆಲ್ಸ್ ವಿಶ್ವ ಸಂಚಲನ ಆ ದಿಕ್ಕಿನಲ್ಲಿ ನಮ್ಮ ಪ್ರಯತ್ನವಾಗಿದೆ. ಈ ಸಂಚಲನವನ್ನು ಬಲಪಡಿಸಲು 16ನೇ ವಿಶ್ವ ಚಾನಲ್ಸ್ ದಿನದಂದು ಒಂದು ದೊಡ್ಡ ಆಧ್ಯಾತ್ಮಿಕ ಪ್ರಯತ್ನವನ್ನು ಮಾಡಲಾಯಿತು.

ಅಂತಹ ಯಾವುದೇ ಪ್ರಯತ್ನವೂ ವ್ಯರ್ಥವಾಗುವುದಿಲ್ಲ. ಹೊಸ ಯುಗವು ಇಳಿದುಬರಲು ಕಾಯುತ್ತಿದೆ. ಅದನ್ನು ಈಗ ಅಭಿವ್ಯಕ್ತಿಸಲು ನಾವು ಕಾಯಬೇಕಾಗಿಲ್ಲ.

## ಬೆಳಕಿನ ಕ್ರಿಯಾಶಕ್ತಿ

**ಮನೋಜ್ ಚೋಪ್ರ; ಅನು: ಶ್ರೀದೇವಿ**

ಮಹರ್ಷಿ ಅಮರರವರು ಮನುಕುಲಕ್ಕಾಗಿ ನಿಸ್ವಾರ್ಥವಾಗಿ ಕೆಲಸ ಮಾಡಿದ ಮಹಾನ್ ಋಷಿಯಾಗಿದ್ದರು. ಭವಿಷ್ಯದ ಕೆಲಸವನ್ನು ಮುಂದುವರಿಸಲು 144 ಧ್ಯಾನಿಗಳು ಸನ್ನದ್ಧರಾಗುತ್ತಾರೆ ಎಂದು ಅವರು ಆಶಿಸಿದರು. ಇಲ್ಲದಿದ್ದರೆ, ಕನಿಷ್ಟ ಏಳು ಜನರು ಪ್ರಕಾಶಿಸುತ್ತಾರೆ ಎಂದು ಅವರು ನಿರೀಕ್ಷಿಸಿದ್ದರು. ಏಳು ಜನರು ಅಲ್ಲದಿದ್ದರೆ, ಕೊನೆಯ ಪಕ್ಷ ಒಬ್ಬರು ಋಷಿಗಳ ನಿರೀಕ್ಷೆಯ ಮಟ್ಟಕ್ಕೇರಬಹುದು ಎಂದು ಭಾವಿಸಿದ್ದರು. ಋಷಿಗಳ ನಿರೀಕ್ಷೆಗಳನ್ನು ಯಾರೂ ಪೂರೈಸದಿದ್ದರೂ, ಅವರು ತಮ್ಮ ಕರ್ತವ್ಯವನ್ನು ಮಾಡಿದ ತೃಪ್ತಿಯೊಂದಿಗೆ ತಮ್ಮ ದೇಹವನ್ನು ಬಿಡಲು ಸಿದ್ಧರಾಗಿದ್ದರು.

ಅವರ ಆಳವಾದ ಬೋಧನೆಗಳು, ಪ್ರತಿಯೊಬ್ಬ ವ್ಯಕ್ತಿಯ ಬಗ್ಗೆ ಅಪಾರ ತಾಳ್ಮೆ ಇರಿಸಿಕೊಂಡು ಈ ಕೆಲಸವನ್ನು ಮಾಡಲು ಮತ್ತು ಪ್ರತಿಯೊಬ್ಬ ವ್ಯಕ್ತಿಗೆ ತಮ್ಮದೇ ಆದ ವೇಗದಲ್ಲಿ ಬೆಳೆಯಲು ಸಂಪೂರ್ಣ ಸ್ವಾತಂತ್ರ್ಯವನ್ನು ನೀಡಲು ನಮಗೆ ಮಾರ್ಗದರ್ಶನ ನೀಡುತ್ತವೆ. ನಾವು ನಮ್ಮ ಕೆಲಸವನ್ನು ಮಾಡಬೇಕು ಮತ್ತು ಮನುಕುಲವು ತನ್ನದೇ ಆದ ಮಾರ್ಗವನ್ನು ಆಯ್ಕೆ ಮಾಡಿಕೊಳ್ಳಲು ಬಿಡಬೇಕು. 16ನೇ ವಿಶ್ವ ಚಾನೆಲ್ ದಿನವು ಜಗತ್ತಿಗೆ ಹೆಚ್ಚಿನ ಅರಿವು, ಸಾಮರಸ್ಯ ಮತ್ತು ಸಕಾರಾತ್ಮಕ ಪರಿವರ್ತನೆಯನ್ನು ತರಲಿ.

**ಮಾನಸ ಫೌಂಡೇಶನ್ (ರಿ)**
ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರಸ್ತೆ), ಬೆಂಗಳೂರು–560077, ಭಾರತ.
ಫೋನ್: 99000 75280 (10am to 5pm), ಇ–ಮೇಲ್: info@lightagemasters.com
website: www.lightagemasters.com, www.lightchannels.com

## ಬೆಳಕಿನ ಮಾಸ್ಟರ್‌ಗಳ ವಿವೇಕವಾಣಿ

ಅನು: ಶ್ರೀದೇವಿ

- ಮೇಲೆ ಏರಲು ಪ್ರಯತ್ನಿಸುವವರು ಮಾತ್ರ ಬೀಳುತ್ತಾರೆ. ನೆಲದ ಮೇಲಿರುವ ಇತರರು ಯಾವಾಗಲೂ ಸುರಕ್ಷಿತವಾಗಿರುತ್ತಾರೆ. ಬೀಳುವುದಿಲ್ಲ. ನಾವು ಬಿದ್ದರೂ, ಮೇಲೇರಲೇಬೇಕು. ನಾವು ವಿಫಲವಾದರೂ, ಪ್ರಯತ್ನ ಮುಂದುವರೆಸಬೇಕು.

- ನಾವು ನಮ್ಮನ್ನು ಆಧ್ಯಾತ್ಮಿಕಗೊಳಿಸಿಕೊಂಡರೆ, ನಮ್ಮ ಅನೇಕ ಸಮಸ್ಯೆಗಳು ಅಥವಾ ನಮ್ಮ ಬಹುತೇಕ ಎಲ್ಲಾ ಸಮಸ್ಯೆಗಳು, ಭೌತಿಕ ಸಮಸ್ಯೆಗಳು ಸಹ ಪರಿಹಾರ ವಾಗುತ್ತವೆ. ವೈಯಕ್ತಿಕ ಮಟ್ಟದಲ್ಲಿ ಪವಾಡದಂತಹ ವಿಷಯಗಳು ಸಂಭವಿಸುತ್ತವೆ.

- ಶರಣಾಗತಿ ಎಂದರೆ ಮೊದಲು ದೇವರೊಂದಿಗೆ ಪ್ರೀತಿಯ ಬಂಧವನ್ನು ಸ್ಥಾಪಿಸುವುದು – ದೇವರನ್ನು ನಮ್ಮ ಜೀವನ ಸಂಗಾತಿಯನ್ನಾಗಿ ಮಾಡಿಕೊಳ್ಳುವುದು, ನಂತರ ಅವನಿಗೆ ಶ್ರುತಿಗೊಳ್ಳುವುದು ಮತ್ತು 24 ಗಂಟೆಗಳ ಕಾಲ ಅವನ ಮಾರ್ಗದರ್ಶನದಲ್ಲಿ ಬದುಕುವುದು. ಶರಣಾಗತಿ ಎಂದರೆ ನಮ್ಮ ಅಹಂಅನ್ನು ಹಿಂದಕ್ಕೆ ತಳ್ಳುವುದು ಮತ್ತು ನಮ್ಮ ಇಡೀ ಜೀವನವನ್ನು ತುಂಬಲು ದೇವರನ್ನು ಆಹ್ವಾನಿಸುವುದು. ಅದೇ ಶರಣಾಗತಿ.

- ಒತ್ತಡವು ಒಂದು ರೀತಿಯ ಗಾಬರಿಯ ಪ್ರತಿಕ್ರಿಯೆಯಾಗಿದೆ. ನಾವು ಅಸಹಾಯಕರಾಗಿರುವಾಗ, ಪರಿಸ್ಥಿತಿಯಿಂದ ಹೊರಬರಲು ದಾರಿ ಕಂಡುಕೊಳ್ಳಲು ಸಾಧ್ಯವಾಗದಿದ್ದಾಗ, ಅದನ್ನು ಎದುರಿಸಲು ಅಸಮರ್ಥ ರಾದಾಗ, ಹತಾಶರಾದಾಗ ಅಥವಾ ಫಲಿತಾಂಶಗಳ ಬಗ್ಗೆ ಅನಿಶ್ಚಿತರಾಗಿರುವಾಗ ನಾವು ಒತ್ತಡಕ್ಕೊಳಗಾಗುತ್ತೇವೆ. ಒತ್ತಡವು ಸ್ವಾಭಾವಿಕ.

- ನೀವು ಒತ್ತಡಕ್ಕೊಳಗಾದಾಗಲೆಲ್ಲಾ, ಬೆಳಕಿನ ಕಿರಣವೊಂದು ನಿಮ್ಮ ತಲೆಯನ್ನು ಪ್ರವೇಶಿಸುತ್ತಿದೆ ಎಂದು ಕಲ್ಪಿಸಿಕೊಳ್ಳಿ. ಇದು ಸಾಮಾನ್ಯ ಬೆಳಕಲ್ಲ. ದೇವರಿಂದ ಬಂದ ಈ ಬೆಳಕು ನಮಗೆ ಬೇಕಾದ ಎಲ್ಲಾ ಸಹಾಯವನ್ನು ಹೊಂದಿದೆ. ಇದು ಅಗತ್ಯ ಮಾಹಿತಿ, ಸಲಹೆ, ಪರಿಹಾರ ಮತ್ತು ಉತ್ತರವನ್ನು ಒಳಗೊಂಡಿದೆ. ಅಷ್ಟೇ ಅಲ್ಲ, ನಮಗೆ ಸಾಕಷ್ಟು ಬಲವನ್ನು ನೀಡಲು ಈ ಬೆಳಕು ಹೆಚ್ಚಿನ ಚೈತನ್ಯವನ್ನು ಹೊಂದಿದೆ. ಇದು ಪರಿಸ್ಥಿತಿಯನ್ನು ಎದುರಿಸಲು ಮತ್ತು ಅದರಿಂದ ಹೊರಬರಲು ನಮಗೆ ಬಲವನ್ನು ನೀಡುತ್ತದೆ.

- ಫಲಿತಾಂಶದ ಬಗ್ಗೆ ನಾವು ಹೆಚ್ಚು ಚಿಂತಿಸದಿದ್ದರೆ, ಒತ್ತಡವನ್ನು ಉಂಟುಮಾಡುವ ಪರಿಸ್ಥಿತಿಯ ಫಲಿತಾಂಶದ ಬಗ್ಗೆ ನಾವು ಹೆಚ್ಚು ಚಿಂತಿತ ರಾಗಿಲ್ಲದಿದ್ದರೆ, ಆಗ ಬಹಳಷ್ಟು ಪರಿಹಾರವಿರುತ್ತದೆ. ನಾವು ನಿಜವಾಗಿಯೂ ಯೋಚನೆಗೀಡಾಗುವುದಿಲ್ಲ, ನಾವು ನಿಜವಾಗಿಯೂ ಆತಂಕಗೊಳ್ಳುವುದಿಲ್ಲ ಅಥವಾ ಚಿಂತಿತರಾಗುವುದಿಲ್ಲ, ಏಕೆಂದರೆ ನಾವು ನಮ್ಮ ಸಮಸ್ಯೆಯನ್ನು ದೇವರ ಮುಂದೆ ಇಟ್ಟಾಗ, ಅವನು ನಮ್ಮನ್ನು ನೋಡಿಕೊಳ್ಳುತ್ತಾನೆ ಎಂದು ನಮಗೆ ತಿಳಿದಿರುತ್ತದೆ. ಫಲಿತಾಂಶ ಏನೇ ಇರಲಿ, ಅದು ಸರಿಯಾದದ್ದಾಗಿರುತ್ತದೆ ಎಂದು ನಮಗೆ ತಿಳಿದಿರುತ್ತದೆ.

– ಗುರೂಜಿ ಕೃಷ್ಣಾನಂದ

## 16ನೇ ವಿಶ್ವ ಚಾನಲ್ಸ್ ದಿನದ ಫೋಟೋಗಳು



ವಿಶ್ವ ಚಾನಲ್ಸ್ ದಿನದಂದು ಬ್ರೋಕರೇಜ್ ಫ್ರೀ ಕಂಪನಿಯ ನೌಕರರು ಆನ್‌ಲೈನ್ ಮಾರ್ಗದರ್ಶಿತ ಲೈಟ್ ಚಾನಲಿಂಗ್ ಸೆಷನ್‌ನಲ್ಲಿ ಭಾಗವಹಿಸಿದರು.



ಫೋಟೊ 1: ವಿಶ್ವ ಚಾನಲ್ಸ್ ದಿನದ ಆಚರಣೆಗಾಗಿ ಲೈಟ್ ಚಾನಲಿಂಗ್ ತಂತ್ರವನ್ನು ಶಾಲೆಯ ಬೋರ್ಡ್ ಮೇಲೆ ಬರೆಯುತ್ತಿರುವುದು. ಫೋಟೊ 2 ಮತ್ತು 3: ಬೆಂಗಳೂರಿನ ಶಾಲೆಗಳ ಮಕ್ಕಳು ಲೈಟ್ ಚಾನಲ್ ಮಾಡುತ್ತಿರುವುದು. ಫೋಟೊ 4: ಕೃತಜ್ಞತೆ ಮತ್ತು ಭಕ್ತಿಯಿಂದ ಶಾಲಾ ಮಕ್ಕಳು ಮಹರ್ಷಿ ಅಮರರವರಿಗೆ ಪುಷ್ಪ ನಮನ ಸಲ್ಲಿಸುತ್ತಿರುವುದು.



ವಿಶ್ವ ಚಾನೆಲ್ಸ್ ದಿನದಂದು ಬೆಂಗಳೂರಿನಲ್ಲಿ ಲೈಟ್ ಚಾನಲ್ ಮಾಡಲು ಸಾವಿರಾರು ವಿದ್ಯಾರ್ಥಿಗಳು ಮೌನವಾಗಿ ಒಟ್ಟುಗೂಡಿದರು.

## 16ನೇ ವಿಶ್ವ ಚಾನಲ್ಸ್ ದಿನ: ಒಂದು ವರದಿ

ಮನೋಜ್ ಚೋಪ್ರ; ಅನು: ಕಾಂಚನಲತಾ

ಒಂದು ಮಹತ್ತರವಾದ ಗುರಿಯನ್ನು ಸಾಧಿಸಲು ಹೆಚ್ಚು ಜನರ ಅವಶ್ಯಕತೆ ಇಲ್ಲ ಎಂದು ನಾನು ಸದಾ ನಂಬಿದ್ದೇನೆ—ಅದು, ಗುರಿಯುಳ್ಳ, ಸಮರ್ಪಿತ ಭಾವವುಳ್ಳ ಹಾಗೂ ಗಾಢವಾದ ಆಸಕ್ತಿಯುಳ್ಳ ಹಾಗೂ ಈ ಕೆಲಸವನ್ನು ಸಮಂಜಸವಾಗಿ ಅರ್ಥ ಮಾಡಿಕೊಂಡ ಮತ್ತು ಈ ಕೆಲಸದೊಂದಿಗೆ ಶ್ರುತಿಗೊಂಡಿರುವ ಒಂದು ಸಣ್ಣ ತಂಡವನ್ನು ಬಯಸುತ್ತದೆ. ನಮ್ಮ ಕಾರ್ಯಕರ್ತರು ಈ ಎಲ್ಲಾ ಗುಣಗಳನ್ನೂ ಪ್ರತಿಬಿಂಬಿಸುತ್ತಾರೆ. ಇವೆಲ್ಲಕ್ಕೂ ಮಿಗಿಲಾಗಿ, ಅವರೆಲ್ಲರೂ, ಅವರ ಮಾಸ್ಟರ್‌ಗಳಾದ ಗುರೂಜಿ ಕೃಷ್ಣಾನಂದ ಮತ್ತು ಅಮರ ಮಹರ್ಷಿಯವರ ದೂರದೃಷ್ಟಿಯನ್ನು ಗ್ರಹಿಸಿಕೊಂಡಿದ್ದಾರೆ. ವಿಶ್ವ ಚಾನಲ್ಸ್ ದಿನವು (ವರ್ಲ್ಡ್ ಚಾನೆಲ್ಸ್ ಡೇ) ಅವರ ಕನಸಿನೆಡೆಗಿನ ಒಂದು ಬೃಹತ್ತಾದ ಹೆಜ್ಜೆ.

ಜಾಗತಿಕ ಶಾಂತಿಯನ್ನು ಸ್ಥಾಪಿಸುವ ಅನ್ವೇಷಣೆಯಲ್ಲಿ 16ನೇ ವಿಶ್ವ ಚಾನಲ್ಸ್ ದಿನವನ್ನು ಜನವರಿ 30, 2026ರಂದು ಆಚರಿಸಲಾಯಿತು. ನೂರಾರು ಕಾರ್ಯಕರ್ತರು ಅವಿಶ್ರಾಂತವಾಗಿ ಕೆಲಸ ಮಾಡಿದರು ಹಾಗೂ ಸುಮಾರು ಏಳು ಲಕ್ಷ ಮಕ್ಕಳಿಂದ ಲೈಟ್ ಚಾನೆಲಿಂಗ್ ಮಾಡಿಸಿದರು. ನಮ್ಮ ಸಾಮಾಜಿಕ ಮಾಧ್ಯಮ ತಂಡವು ಬಹು ಎಚ್ಚರಿಕೆಯಿಂದ ನಿಖರವಾಗಿ ಯೋಜಿಸಿದ್ದ ಆನ್‌ಲೈನ್ ಸೆಷನ್‌ಗಳಲ್ಲಿ ಸಾವಿರಾರು ಜನರು ಭಾಗವಹಿಸಿದರು. ವಿಶ್ವ ಚಾನಲ್ಸ್ ದಿನವು ಎಷ್ಟು ಸುಸೂತ್ರವಾಗಿ ಮುಗಿಯಿತೋ, ತೆರೆಯ ಹಿಂದೆ ಅಷ್ಟೇ ಗಣನೀಯವಾದ ಕೆಲಸವೂ ನೆರವೇರಿದೆ. ಹೆಚ್ಚು ಬೆಳಕನ್ನು ಕೆಳತರಲು ಇಡೀ ಮಾನಸ ಕುಟುಂಬದ ಪ್ರಾಮಾಣಿಕ ಹಾಗೂ ಸಾಮೂಹಿಕ ಪರಿಶ್ರಮ ಇದಾಗಿದೆ.

ಆತ್ಮಾವಲೋಕನ ಮಾಡಿಕೊಳ್ಳಲು, ಹದಿನಾರು ವರ್ಷಗಳು ಸರಿಯಾದ ಸಮಯ! ಈ ಜಗತ್ತು ಇಂದಿಗೂ ಮೊದಲಿನಂತೆಯೇ ಕಾಣಬಹುದು—ಹಿಂಸೆ, ಭ್ರಷ್ಟಾಚಾರ ಇತ್ಯಾದಿಗಳು ಮುಂಚಿನಂತೆಯೇ ಮುಂದುವರೆದಿವೆ. ಲಕ್ಷಾಂತರ ಮಕ್ಕಳು ಮತ್ತು ವಯಸ್ಕರಿಂದ ನಡೆಯುವ ಚಾನೆಲಿಂಗ್‌ನ ಪರಿಣಾಮ ಎಲ್ಲಿ ಕಾಣುತ್ತಿದೆ ಎಂದು ಕೆಲವರು ವಿಸ್ಮಯಗೊಳ್ಳಬಹುದು. ಕಾಣಬಲ್ಲ ಬದಲಾವಣೆಗಳು ಎಲ್ಲಿವೆ? ಸತ್ಯವೆಂದರೆ, ಬೆಳಕು ಎಂದಿಗೂ ಕಾರ್ಯವಹಿಸುತ್ತದೆ ಆದರೆ ಭೌತಿಕ ಮಟ್ಟದಲ್ಲಿ ನಾವು ಅದನ್ನು ತಕ್ಷಣವೇ ನೋಡಲಾಗುವುದಿಲ್ಲ. ಪರಿವರ್ತನೆ ಹೊಂದಲು ಬೆಳಕು ಅವಕಾಶಗಳನ್ನು ಕೊಡುತ್ತದೆ. ನಾವು ಇನ್ನೂ ಸಿದ್ಧರಾಗಿಲ್ಲ, ನಮ್ಮ ಅಹಂಕಾರವನ್ನು ತೃಪ್ತಿಪಡಿಸಿಕೊಳ್ಳುವಂತಹ ಕ್ಷುಲ್ಲಕ ವಿಚಾರಗಳಲ್ಲಿಯೇ ಇನ್ನೂ ವ್ಯಸ್ತರಾಗಿದ್ದೇವೆ. ಬೆಳಕು ಅತ್ಯಂತ ಸೂಕ್ಷ್ಮ ಮಟ್ಟದಲ್ಲಿ ಕೆಲಸ ನಿರ್ವಹಿಸುತ್ತದೆ ಹಾಗೂ ಪ್ರಕಟಗೊಳ್ಳಲು ಸಮಯ ತೆಗೆದುಕೊಳ್ಳುತ್ತದೆ. ಈಗಾಗಲೇ ಇಲ್ಲಿ ಸಾಕಷ್ಟು ಬೆಳಕು ಇದೆ ಆದರೆ ಅದನ್ನು ಪ್ರಕಟಪಡಿಸುವಲ್ಲಿ ನಾವು ವಿಫಲರಾಗುತ್ತಿದ್ದೇವೆ. ಬೆಳಕು ಯಾರ ಮೇಲೂ ಯಾವುದೇ ರೀತಿಯ ಹೇರಿಕೆಯನ್ನು ಹಾಕುವುದಿಲ್ಲ ಎಂಬ ವಿಚಾರವನ್ನು ಅರ್ಥ ಮಾಡಿಕೊಳ್ಳಬೇಕು. ಬದಲಾವಣೆಗಳು ಪ್ರಕಟಗೊಳ್ಳಬೇಕಾದರೆ, ನಾವು ನಮ್ಮ ಹಳೆಯ ರೀತಿಗಳನ್ನು ಕೈಬಿಡಬೇಕು ಮತ್ತು ಬದಲಾವಣೆಗಳನ್ನು ಒಪ್ಪಿಕೊಳ್ಳಬೇಕು. ನವ ಯುಗವು ಬೇರೆ ಎಲ್ಲಿಂದಲೋ ಕೆಳಗಿಳಿದು ಬರುತ್ತದೆ ಎಂದು ನಾವು ನಂಬಿದ್ದೇವೆ ಆದರೆ ಅದು ನಮ್ಮ ಅಂತರಾಳದಲ್ಲಿ ಆರಂಭವಾಗುತ್ತದೆ. ಹೆಚ್ಚು ಹೆಚ್ಚು ಆತ್ಮಗಳು ಬೆಳಕಿಗೆ ಎಚ್ಚೆತ್ತುಕೊಂಡಂತೆ, ನಮ್ಮೆಲ್ಲರ ಮೂಲಕ ನವಯುಗವು ತೆರೆದುಕೊಳ್ಳುತ್ತದೆ.

ಸುದ್ದಿ ಮಾಧ್ಯಮಗಳು ಕೇವಲ ಭಾವೋದ್ರೇಕಕಾರಿತ್ವದಲ್ಲಿ ಮಾತ್ರ ಆಸಕ್ತಿ ಹೊಂದಿವೆ ಮತ್ತು ಕೇವಲ ನಕಾರಾತ್ಮಕತೆಯನ್ನು ಮಾತ್ರ ಎತ್ತಿಹಿಡಿಯುತ್ತವೆ. ಹಾಗಿದ್ದರೂ ಕೂಡಾ, ನಾವು ಎಚ್ಚರಿಕೆಯಿಂದ ಗಮನಿಸಿದರೆ, ಪ್ರಕ್ಷುಬ್ಧತೆಯ ನಡುವಿನಿಂದ ಹೊರಹೊಮ್ಮುತ್ತಿರುವ ಸತ್ಯತೆಗಳನ್ನೂ ಕಾಣಬಹುದು. ಮೌನಸ್ವರೂಪದ್ದಾದರೂ ಅಗಾಧವಾದ ಅನೇಕ ಆಧ್ಯಾತ್ಮಿಕ ಬದಲಾವಣೆಗಳು ಆಗುತ್ತಿವೆ. ಅವುಗಳ ಪರಿಣಾಮಗಳನ್ನು ಅರಿತುಕೊಳ್ಳಲು ನಮಗೆ ಬಹಳ ತಾಳ್ಮೆ ಮತ್ತು ಆಧ್ಯಾತ್ಮಿಕ ವಿವೇಕದ ಅಗತ್ಯವಿದೆ. ಈ ಮಟ್ಟದಲ್ಲಿ ಬದಲಾವಣೆಗಳು ಪ್ರಕಟವಾಗಬೇಕಿದ್ದರೆ, ಮಾನವಕುಲವು ತನ್ನನ್ನು ತಾನು ತಯಾರಿ ಮಾಡಿಕೊಳ್ಳಬೇಕು. ಮಾನವ ಜನಾಂಗವು ಇಡುವ ಮುಂದಿನ ಹೆಜ್ಜೆಗಾಗಿ ಆಸ್ಟ್ರಲ್ ಮಾಸ್ಟರ್‌ಗಳು ತಾಳ್ಮೆಯಿಂದ ಕಾಯುತ್ತಿದ್ದಾರೆ.

ವಿಶ್ವ ಚಾನಲ್ಸ್ ದಿನದ ಯಶಸ್ಸಿನ ಹಿಂದೆ ನಮ್ಮ ಕಾರ್ಯಕರ್ತರ ನಿಸ್ವಾರ್ಥ ಪ್ರೀತಿ ಮತ್ತು ಸಮರ್ಪಣೆ ಇದೆ. ಅಂದಿನ ದಿನ ಆನ್‌ಲೈನ್ ಸೆಷನ್‌ಗಳಲ್ಲಿ ಭಾಗವಹಿಸಿದ ಶಿಕ್ಷಕರಿಗೆ, ವಿದ್ಯಾರ್ಥಿಗಳಿಗೆ, ಶಾಲಾ ಅಧಿಕಾರಿಗಳಿಗೆ ಮತ್ತು ಸಾವಿರಾರು ವಯಸ್ಕರಿಗೆ ನಾವು ಬಹಳ ಕೃತಜ್ಞರಾಗಿದ್ದೇವೆ. ಅವರು ಸತ್ಯವಾಗಿಯೂ ನಮ್ಮ ಕಾರ್ಯವನ್ನು ಅರ್ಥಮಾಡಿಕೊಂಡಿದ್ದಾರೆ ಹಾಗೂ ದೂರದೃಷ್ಟಿಯನ್ನು ಪ್ರತಿಧ್ವನಿಸುತ್ತಾರೆ. ಅದ್ಭುತವಾದ ಸಾಧನೆಗಳು ಕೇವಲ ಒಬ್ಬ ವ್ಯಕ್ತಿಯ ಶ್ರಮದ ಫಲವಲ್ಲ ಅವು ಸದಾ ಸಂಘಟಿತ ತಂಡದ ಶ್ರಮದ ಫಲವಾಗಿರುತ್ತವೆ.

ಆತ್ಮತೃಪ್ತಿಯನ್ನುಂಟುಮಾಡುವ ಲೈಟ್ ಚಾನೆಲಿಂಗ್ ಕೆಲಸಕ್ಕೆ ನಮ್ಮ ಗುರೂಜಿಯವರಿಂದ ದೊರೆತ ಅನುಗ್ರಹಕ್ಕಾಗಿ ನಾವು ನಮ್ಮ ಅಂತರಾಳದಿಂದ ಕೃತಜ್ಞರಾಗಿದ್ದೇವೆ. ಈ ಕೆಲಸವು ನಮ್ಮ ಬದುಕಿಗೆ ಉದ್ದೇಶ ಮತ್ತು ಅರ್ಥ ನೀಡಿರುವುದು ಮಾತ್ರವಲ್ಲದೆ ಉನ್ನತ ಹೈರಾರ್ಕಿಯ ದೂರದೃಷ್ಟಿಯನ್ನು ಸಾಕಾರಗೊಳಿಸುವ ಕಾರ್ಯಕ್ಕೆ ನಮ್ಮ ಕೊಡುಗೆಯನ್ನೂ ನೀಡುತ್ತದೆ. ಈ ಉನ್ನತ ಧ್ಯೇಯಕ್ಕಾಗಿ ನಾವೆಲ್ಲ ಒಟ್ಟಾಗಿ ಮುಂದೆ ಸಾಗೋಣ ಮತ್ತು ಪ್ರತಿನಿತ್ಯ ಲೈಟ್ ಚಾನೆಲ್ ಮಾಡೋಣ. ■

### ಶಾಲೆಗಳಿಗೊಂದು ಮನವಿ

ನಿಮ್ಮ ಶಾಲೆಯ ಪ್ರಾರ್ಥನಾ ಸಮಯದಲ್ಲಿ ಅಥವಾ ಆನ್‌ಲೈನ್ ತರಗತಿಗಳ ಪ್ರಾರಂಭದಲ್ಲಿ ಅಥವಾ ಇನ್ನಾವುದೇ ಸಮಯದಲ್ಲಿ ಬೆಳಕನ್ನು ಪ್ರತಿನಿತ್ಯ 3 ರಿಂದ 7 ನಿಮಿಷಗಳ ಕಾಲ ಚಾನಲ್ ಮಾಡಿಸು–ವುದರ ಮೂಲಕ ಲೈಟ್‌ಚಾನಲ್ಸ್ ವಿಶ್ವ ಸಂಚಲನವನ್ನು ಬಲಗೊಳಿಸಲು ಸಹಾಯ ಮಾಡಿ.

### ಶಾಲೆಗಳಲ್ಲಿ ಲೈಟ್ ಚಾನಲಿಂಗ್

| | | |
|---|---|---|
| ಭಾಗವಹಿಸಿದ ಶಾಲೆಗಳ ಸಂಖ್ಯೆ | : | 6175 |
| ಲೈಟ್ ಚಾನಲ್ ಮಾಡಿರುವ ವಿದ್ಯಾರ್ಥಿಗಳ ಸಂಖ್ಯೆ | : | 30.98 ಲಕ್ಷ |
| ನಿಯತವಾಗಿ ಲೈಟ್ ಚಾನಲ್ ಮಾಡುತ್ತಿರುವ ಶಾಲೆಗಳು | : | 508 |
| ನಿಯತವಾಗಿ ಲೈಟ್ ಚಾನಲ್ ಮಾಡುತ್ತಿರುವ ಮಕ್ಕಳು | : | 2.21 ಲಕ್ಷ |



ನಿಮ್ಮ ಕುಟುಂಬದ ಸದಸ್ಯರು ಹಾಗೂ ಸ್ನೇಹಿತರೊಂದಿಗೆ ಈ ವಾರ್ತಾಪತ್ರವನ್ನು ಹಂಚಿಕೊಳ್ಳಿ. ಉಚಿತವಾದ PDF ರೂಪದ ಈ ವಾರ್ತಾಪತ್ರವನ್ನು ನಮ್ಮ ವೆಬ್‌ಸೈಟ್ www.lightchannels.com ನಿಂದ ಡೌನ್‌ಲೋಡ್ (download) ಮಾಡಿಕೊಳ್ಳಬಹುದು.

ಲಕ್ಷಾಂತರ ಜನರು ನಿಯತವಾದ ಲೈಟ್ ಚಾನಲಿಂಗ್ ಅಭ್ಯಾಸದಿಂದ ಪ್ರಯೋಜನಗಳನ್ನು ಪಡೆದಿದ್ದಾರೆ. ಅನೇಕರು ಸೋಜಿಗವೆನಿಸುವಂತಹ ಸಹಾಯವನ್ನು ಹಾಗೂ ಅದ್ಭುತವಾದ ಅನುಭವಗಳನ್ನು ಪಡೆದಿದ್ದಾರೆ. ನಿಮ್ಮ ಅನುಭವಗಳು ಇತರರಿಗೆ ಸ್ಫೂರ್ತಿ ನೀಡಬಹುದು ಹಾಗೂ ಮಾರ್ಗದರ್ಶನ ಕೂಡ ಮಾಡಬಹುದು. ದಯವಿಟ್ಟು ನಿಮ್ಮ ಅನುಭವಗಳನ್ನು ನಮ್ಮ ಜೊತೆ ಹಂಚಿಕೊಳ್ಳಿ. ನಮ್ಮ ಇ–ಮೇಲ್ info@lightagemasters.com ಗೆ ಬರೆಯಿರಿ.

ಅನೇಕ ಮಕ್ಕಳ, ಶಿಕ್ಷಕರ ಹಾಗೂ ಕಾರ್ಯಕರ್ತರ ಅನುಭವಗಳನ್ನು 'Experiences of Light Channels' ಎಂಬ ಪುಸ್ತಕದಲ್ಲಿ ಸಂಗ್ರಹಿಸಲಾಗಿದೆ. ಈ ಪುಸ್ತಕ ಹೊರತಂದ ಮೇಲೆ ಮತ್ತೆ ಅನೇಕರು ತಮ್ಮ ಅನುಭವಗಳನ್ನು ಹಂಚಿಕೊಂಡಾಗ, ಎರಡನೆಯ ಸಂಪುಟವನ್ನು ಹೊರ ತರಲಾಯಿತು. ಈ ಎರಡೂ ಸಂಪುಟಗಳನ್ನು ನಮ್ಮ ವೆಬ್‌ಸೈಟ್ www.lightagemasters.com ನಿಂದ ಉಚಿತವಾಗಿ ಡೌನ್‌ಲೋಡ್ (download) ಮಾಡಿಕೊಳ್ಳಬಹುದು.





## ಅನುಭವಗಳು

ಸಂ: ವೈಶಾಲಿ ಜೋಶಿ; ಅನು: ಸುಜಾತ ವಿ

ಬೆಂಗಳೂರಿನ ಸಾತನೂರಿನಲ್ಲಿರುವ ಕರಿಯಪ್ಪ ಮೆಮೋರಿಯಲ್ ಶಾಲೆಯಲ್ಲಿ ನಾವು ಗ್ರೇಡ್ 3 ಮತ್ತು ಅದಕ್ಕಿಂತ ಮೇಲಿನ ತರಗತಿಯ ವಿದ್ಯಾರ್ಥಿಗಳಿಗೆ ಲೈಟ್ ಚಾನೆಲಿಂಗ್ ಸೆಷನ್‌ಗಳನ್ನು ನಡೆಸಿದೆವು. ಏಳು ನಿಮಿಷಗಳ ಕಾಲ ಮಕ್ಕಳು ಕಣ್ಣು ಮುಚ್ಚಿ ಬಹಳ ಶಾಂತವಾಗಿ ಕುಳಿತಿದ್ದರು. ಸೆಷನ್‌ನ ನಂತರ, ಶಾಲೆಯ ಇಡೀ ವಾತಾವರಣ ಸಕಾರಾತ್ಮಕತೆಯಿಂದ ತುಂಬಿತ್ತು. ಅವರು ತುಂಬಾ ಸಂತೋಷವಾಗಿದ್ದರು ಮತ್ತು ಈ ಧ್ಯಾನ ಎಷ್ಟು ಪ್ರಭಾವಪೂರ್ಣವಾಗಿದೆ ಎಂಬುದನ್ನು ಕೇವಲ ಏಳು ನಿಮಿಷಗಳಲ್ಲಿ ಅನುಭವಿಸಲು ಸಾಧ್ಯವಾಯಿತು ಎಂದು ಹೇಳಿದರು. ಪ್ರಾಂಶುಪಾಲರು ಈ ತಂತ್ರವನ್ನು ಕಲಿಸಿದ್ದಕ್ಕಾಗಿ ಶಾಲೆಯ ಪರವಾಗಿ ಹೃತ್ಪೂರ್ವಕ ಕೃತಜ್ಞತೆಯನ್ನು ವ್ಯಕ್ತಪಡಿಸಿದರು. ಇದು ಎಲ್ಲಾ ಶಾಲಾ ಮಕ್ಕಳಿಗೆ ತುಂಬಾ ಪ್ರಯೋಜನಕಾರಿಯಾಗಿದೆ ಎಂದು ಅವರು ಹೇಳಿದರು.

ಬೆಂಗಳೂರಿನ ಕನಕಪುರದ ಕೋಡಿಹಳ್ಳಿಯಲ್ಲಿರುವ, ಶತಮಾನೋತ್ಸವವನ್ನು ಆಚರಿಸಿರುವ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ. ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಇಬ್ಬರೂ ಬಹಳ ಸಂತೋಷ ಮತ್ತು ಉತ್ಸಾಹದಿಂದ ಲೈಟ್ ಚಾನೆಲಿಂಗ್ ಮಾಡಿದರು. ಸೆಷನ್‌ನ ನಂತರ, ಮಕ್ಕಳು ಬಂದು ನನ್ನನ್ನು ಸುತ್ತುವರೆದು, ಈ ತಂತ್ರವು ನಿಜವಾಗಿಯೂ ಅದ್ಭುತವಾಗಿದೆಯೆಂದು ಮತ್ತು ಅವರಿಗೆಲ್ಲ ತುಂಬಾ ಸಂತೋಷವಾಯಿತೆಂದು ಹೇಳಿದರು. ಅವರು ತಮ್ಮ ಶಾಲೆಗೆ ಮತ್ತೊಮ್ಮೆ ಭೇಟಿ ನೀಡುವಂತೆ ನನ್ನನ್ನು ವಿನಂತಿಸಿಕೊಂಡರು ಮತ್ತು ಮುಂದಿನ ಬಾರಿ ಅದನ್ನು ಇನ್ನೂ ಉತ್ತಮವಾಗಿ ಅಭ್ಯಾಸ ಮಾಡುವುದಾಗಿ ಹೇಳಿದರು.

ಶಿಕ್ಷಕರು ಸಹ ನನ್ನನ್ನು ಮತ್ತೊಮ್ಮೆ ಭೇಟಿ ಮಾಡಲು ಕೇಳಿಕೊಂಡರು ಮತ್ತು "ಇದು ನಮ್ಮ ಮಕ್ಕಳಿಗೆ ತುಂಬಾ ಉಪಯುಕ್ತವಾಗಿದೆ. ಇದು ನಿಜಕ್ಕೂ ಅದ್ಭುತವಾದ ಧ್ಯಾನ," ಎಂದು ಹೇಳಿದರು.

ಮಕ್ಕಳಲ್ಲಿದ್ದ ಸಂತೋಷವನ್ನು ನೋಡಿದಾಗ ಅದು ಮರೆಯಲಾಗದ ಸಂಭ್ರಮದಂತಿತ್ತು. ನನಗೆ ಅತ್ಯಂತ ಸಂತೋಷವಾಯಿತು ಮತ್ತು ಅಂತಹ ಅದ್ಭುತವಾದ ಅವಕಾಶವನ್ನು ಒದಗಿಸಿದ್ದಕ್ಕಾಗಿ ಲೈಟ್ ಮಾಸ್ಟರ್‌ಗಳಿಗೆ ನನ್ನ ಹೃತ್ಪೂರ್ವಕ ಕೃತಜ್ಞತೆಯನ್ನು ವ್ಯಕ್ತಪಡಿಸುತ್ತೇನೆ.

– ನಾಗರತ್ನ ಕೆ ಎಸ್, ಲೈಟ್ ಚಾನಲ್ ಕಾರ್ಯಕರ್ತೆ

ಲೈಟ್ ಚಾನೆಲಿಂಗ್ ಅಭ್ಯಾಸ ಮಾಡಿದ ನಂತರ ನನ್ನ ಮನಸ್ಸು ಉಲ್ಲಾಸಭರಿತವಾಗುತ್ತದೆ. ಒಂದು ಅಗೋಚರವಾದ ಚೈತನ್ಯ ನನ್ನ ದೇಹದೊಳಗೆ ಪ್ರವೇಶಿಸಿದಂತೆ ಅನಿಸುತ್ತದೆ. ಈಗ, ನನಗೆ ಅಧ್ಯಯನದಲ್ಲಿ ಹೆಚ್ಚಿನ ಆಸಕ್ತಿ ಇದೆ.

– ಪೃಥ್ವಿ ಹೆಚ್ ಎಸ್, 10ನೇ ತರಗತಿ, ಬಾಪು ಹೈಸ್ಕೂಲ್, ಯಶವಂತಪುರ, ಬೆಂಗಳೂರು

ಮಲ್ಲಸಂದ್ರದ ನಿತ್ಯ ಜ್ಯೋತಿ ಪಬ್ಲಿಕ್ ಸ್ಕೂಲ್‌ನ ವಿದ್ಯಾರ್ಥಿನಿಯೊಬ್ಬಳು ಅವಳ ಅನುಭವವನ್ನು ಹಂಚಿಕೊಂಡಳು. ಅವಳು ಪ್ರತಿದಿನ ಲೈಟ್ ಚಾನಲಿಂಗ್ ಮಾಡುತ್ತಿದ್ದಾಳೆ. ಮುಂಚೆ ಚಿಕ್ಕ ವಿಷಯಗಳಿಗೂ ಗಾಬರಿಯಾಗುತ್ತಿದ್ದಳು. ಈಗ, ಅದರಿಂದ ಹೊರಬರಲು ಅವಳಿಗೆ ಸಾಧ್ಯವಾಗಿದೆ ಮತ್ತು ಅವಳು ಏನೇ ಮಾಡಿದರೂ ಆತ್ಮವಿಶ್ವಾಸದಿಂದ ಮಾಡುತ್ತಾಳೆ.


– ಚಂದ್ರಕಲಾ ಡಿ, ಲೈಟ್ ಚಾನೆಲ್ ಕಾರ್ಯಕರ್ತರು

ಬೆಂಗಳೂರಿನ ವೈಟ್‌ಫೀಲ್ಡ್‌ನಲ್ಲಿರುವ ಕುವೆಂಪು ಸ್ಮಾರಕ ವಿದ್ಯಾ ಕೇಂದ್ರದಲ್ಲಿ ನಡೆದ ಲೈಟ್ ಚಾನೆಲಿಂಗ್ ಸೆಷನ್‌ನಲ್ಲಿ 8 ರಿಂದ 10ನೇ ತರಗತಿಯ ಮಕ್ಕಳು ಬೆಳಕನ್ನು ಚಾನೆಲ್ ಮಾಡಿದರು. ಸೆಷನ್ ಮುಗಿದ ಬಳಿಕ, ಒಬ್ಬ ವಿದ್ಯಾರ್ಥಿನಿ ತನ್ನ ಜೀವನದಲ್ಲಿ ಹೆಚ್ಚು ಸಕಾರಾತ್ಮಕ ಶಕ್ತಿಗಳು ಬರುತ್ತಿರುವಂತೆ ಮತ್ತು ನಕಾರಾತ್ಮಕತೆಗಳು ಕಡಿಮೆಯಾಗುತ್ತಿರುವಂತೆ ಅನುಭವವಾಯಿತೆಂದು ಹೇಳಿದಳು. ಇನ್ನೊಬ್ಬ ವಿದ್ಯಾರ್ಥಿ ತನ್ನ ಮನಸ್ಸಿನಲ್ಲಿ ನಕಾರಾತ್ಮಕ ಆಲೋಚನೆಗಳು ಕಡಿಮೆಯಾಗಿವೆ ಮತ್ತು ಅವನ ಮನಸ್ಸಿನಲ್ಲಿ ಸಕಾರಾತ್ಮಕ ಆಲೋಚನೆಗಳು ಮತ್ತು ಕಂಪನಗಳು ಇದ್ದವು ಎಂದು ಹೇಳಿದನು.

– ಕಲ್ಪನಾ ರಾಜಶೇಖರ್, ಲೈಟ್ ಚಾನೆಲ್ ಕಾರ್ಯಕರ್ತೆ



**7 ಲಕ್ಷಕ್ಕೂ ಅಧಿಕ ಜನರು 16ನೇ ವಿಶ್ವ ಚಾನಲ್ಸ್ ದಿನವಾದ ಜನವರಿ 30, 2026 ರಂದು ಲೈಟ್ ಚಾನಲ್ ಮಾಡಿದರು.**



ಭಾಗವಹಿಸಿದ ನಿಮ್ಮೆಲ್ಲರಿಗೂ

**ಧನ್ಯವಾದಗಳು**

ಪ್ರತಿ ತಿಂಗಳ 3ನೇ ಭಾನುವಾರದಂದು ಬೆಳಿಗ್ಗೆ 11 ರಿಂದ 11.30ರ ವರೆಗೆ ನಡೆಯುವ ಮಾರ್ಗದರ್ಶಿತ ಲೈಟ್ ಚಾನಲಿಂಗ್ ಸೆಷನ್‌ನಲ್ಲಿ ಭಾಗವಹಿಸಬೇಕೆಂದು ಕೋರುತ್ತೇವೆ.

ನೇರ ಪ್ರಸಾರ: https://lightagemasters.com

**ನಿಮ್ಮನ್ನೂ ಹೀಲ್ ಮಾಡಿಕೊಳ್ಳಿ, ಪ್ರಪಂಚವನ್ನೂ ಹೀಲ್ ಮಾಡಿ.**

ಬೆಳಕಿನ ಸಂಚಲನ, ಕನ್ನಡ ದ್ವೈಮಾಸಿಕ ಪತ್ರಿಕೆ, ಖಾಸಗಿ ಪ್ರಸಾರಕ್ಕಾಗಿ ಮಾತ್ರ. ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು: ಶ್ರೀದೇವಿ (ಮಾನಸ ಫೌಂಡೇಶನ್ (ರಿ) ಪರವಾಗಿ)
ಪ್ರಕಾಶನ ಸ್ಥಳ: ಮಾನಸ ಫೌಂಡೇಶನ್ (ರಿ), ತಪೋನಗರ, ಚಿಕ್ಕಗುಬ್ಬಿ (ಹೆಣ್ಣೂರು–ಬಾಗಲೂರು ರಸ್ತೆ), ಬೆಂಗಳೂರು-560077
ಮುದ್ರಣ ಸ್ಥಳ: ಜೋಸ್ಕೊ ಪ್ರಿಂಟರ್ಸ್, ರಾಮಮೂರ್ತಿನಗರ, ಬೆಂಗಳೂರು – 560 016.
ಮಾಲೀಕರು: ಮಾನಸ ಫೌಂಡೇಶನ್ (ರಿ), ತಪೋನಗರ, ಚಿಕ್ಕಗುಬ್ಬಿ (ಹೆಣ್ಣೂರು–ಬಾಗಲೂರು ರಸ್ತೆ), ಬೆಂಗಳೂರು - 560077. ಸಂಪಾದಕರು: ಶ್ರೀದೇವಿ